CC No.1109/2021
DW -1

**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 1109/2021**

ಸಾಕ್ಷಿಯ ಹೆಸರುಃ ಎನ್ ಎಸ್ ರಾಜೇಂದ್ರ
ತಂದೆ /ಗಂಡನ ಹೆಸರು ಃ ಎನ್ ಸುಬ್ಬರಾಯ
ವಯಸ್ಸು ಃ 70
ಉದ್ಯೋಗ ಃ 1 ನೇ ದರ್ಜೆ ಗುತ್ತಿಗೆದಾರರು
ವಾಸ ಸ್ಥಳ ಃ ಸೋಮವಾರಪೇಟೆ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 28.06.2025**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಪಿ ಆರ್ ಆರ್ ವಕೀಲರಿಂದ**

ನಾನು ಗಫುರ್ ಎಂಬುವವರ ಬಳಿ ಜೆಲ್ಲಿಯನ್ನು ತೆಗೆದುಕೊಂಡಿದ್ದೆ. ಅವರ ಜೊತೆ ವ್ಯವಹಾರ ಮಾಡುತ್ತಿದ್ದರಿಂದ ಅವರಿಗೆ ಸೆಕ್ಯುರಿಟಿಯಾಗಿ ಇರಲಿಲ್ಲ ಎಂದು ಒಂದು ಚೆಕ್‌ನ್ನು ಕೊಟ್ಟಿದ್ದೆ . ಅವರ ಜೊತೆ ಎಲ್ಲಾ ವ್ಯವಹಾರಗಳು ಮುಗಿಯಿತು . ಎಲ್ಲಾ ಲೆಕ್ಕಾಚಾರಗಳು ಅವರ ಜೊತೆಗೆ ಮುಗಿದಿತ್ತು . ಮುಗಿದ ನಂತರ ಚೆಕ್ ಕೊಡಿ ಎಂದು ಸಾಕಷ್ಟು ಬಾರಿ ಕೇಳಿಕೊಂಡೆ. ಆದರೆ ಕೊಟ್ಟಿರುವುದಿಲ್ಲ. ನಂತರ ಸ್ವಲ್ಪ ತಿಂಗಳುಗಳು ಕಳೆದ ಮೇಲೆ ಬ್ಯಾಂಕಗೆ ಚೆಕ್ ಹಾಕಿದ್ದು ಪಿರ್ಯಾದಿದಾರರು ಸದರಿ ಚೆಕ್ ನ್ನು ಬ್ಯಾಂಕಗೆ ಹಾಕಿರುತ್ತಾರೆ . ಪಿರ್ಯಾದಿದಾರರುಮತ್ತು ನನಗೂ ಯಾವುದೆ ರೀತಿ ವ್ಯವಹಾರ ಇರುವುದಿಲ್ಲ. ಆದ್ದರಿಂದ ನಾನು ಬ್ಯಾಂಕಗೆ ಹೇಳಿ "ಸ್ಟಾಪ್ ಪೇಮೆಂಟ್ " ಮಾಡಿಸಿರುತ್ತೇನೆ . ನನಗೂ ಹಾಗೂ ಪಿರ್ಯಾದಿದಾರರು ಯಾವುದೆ ರೀತಿ ಸಂಬಂಧ ಇಲ್ಲದ ಕಾರಣ ನನ್ನನ್ನು ಈ ಕೇಸಿನಿಂದ ಮುಕ್ತಿಗೊಳಿಸಿ .

**ಪಿರ್ಯಾದಿದಾರರು ಪರ ವಕೀಲರು ಗೈರು ಹಾಜರಿದ್ದರಿಂದ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-
ಪ್ರ ದ ನ್ಯಾ ದಂ, ಕುಶಾಲನಗರ.